ವಿಶ್ವವಿದ್ಯಾಲಯಕ್ಕೆ ಕರೆದರು. ಆಗ ಉಪನ್ಯಾಸಕರಿಗೆ ಇದ್ದ ಷರತ್ತು ಏನು ಎಂದರೆ 'ಏನಾದರೂ ಹೊಸದನ್ನು ಹೇಳಬೇಕು' ಎನ್ನುವುದು. ಅದನ್ನು ಒಂದು ಕಡೆ ಪ್ರಸ್ತಾಪ ಮಾಡಿದ ಎಲಿಯಟ್ 'ಈ ಪರಿಸ್ಥಿತಿಯಲ್ಲಿ ಹೊಸತಾಗಿ ಹೇಳುವುದಕ್ಕೆ ಏನಿದೆ' ಎಂದು ಕೇಳಿಕೊಳ್ಳುತ್ತಾನೆ. ಆದರೂ ಅವನು ಹೊಸತನ್ನೇ ಹೇಳುತ್ತಾನೆ. ಎಲಿಯಟ್‌ನಿಂದ ನಾನು ಕಲಿತ ಇನ್ನೊಂದು ವಿಷಯ ಕಲಿತುಕೊಂಡೆ. 'ಅತ್ಯುತ್ತಮ ಸಾಹಿತ್ಯವನ್ನಷ್ಟೇ ಕೊಡಿ. ಅದರ ಬಗ್ಗೆ ಮಾತ್ರ ಬರೆಯುತ್ತೇನೆ' ಎಂಬ ಮನೋಭಾವ ವಿಮರ್ಶಕನಿಗೆ ಇರಬಾರದು. ಅತ್ಯುತ್ತಮ ಸಾಹಿತ್ಯ ಎಂದು ಯಾರು ನಿರ್ಧರಿಸುವುದು? ಈಗಾಗಲೇ ಯಾರೋ ಒಬ್ಬರು ಅತ್ಯುತ್ತಮ ಎಂದು ನಿರ್ಧರಿಸಿದ್ದು ಬೆಸ್ಟ್ ಆಗಿರಲಿಕ್ಕಿಲ್ಲ. ನಾನೇ ಹೊಸತಾಗಿ ನೋಡಿ ನಿರ್ಧರಿಸಬೇಕಲ್ಲವೇ?

● **ನಿಮ್ಮ ಮೊದಲ ಪುಸ್ತಕ 'ಕೃತಿಪರೀಕ್ಷೆ'ಯಲ್ಲಿ ಕೃತಿನಿಷ್ಠ ವಿಮರ್ಶೆ ಇದೆ. ನಂತರ ಕೃತಿನಿಷ್ಠ ವಿಮರ್ಶೆಯಿಂದ ಸಾಕಷ್ಟು ದೂರ ಸರಿದಿದ್ದೀರಿ. ಇದು ಉದ್ದೇಶಪೂರ್ವಕವಾಗಿ ಮಾಡಿದ್ದಾ?**

ಸಾಂಸ್ಕೃತಿಕ ಒತ್ತಡಗಳಿರುತ್ತವಲ್ಲ. ನಾನು ಒಂದು ಸಂಸ್ಕೃತಿಯ ಭಾಗ, ಸಮೂಹದ ಭಾಗ. ನಾನೊಬ್ಬನೇ ಪ್ರತ್ಯೇಕ ಅಲ್ಲ. ಬರಹಗಾರನಾಗಿ ನಾನು ಸಮಾಜಕ್ಕೆ ಸೇರಿದವನು. ಸಮಾಜದಲ್ಲಿ ಆಗುವ ಬದಲಾವಣೆಗೆ ತಕ್ಕ ಹಾಗೆ ನಾವೂ ತಿದ್ದಿಕೊಳ್ಳಬೇಕಾಗುತ್ತದೆ. ವಿಮರ್ಶಕನೇನೂ ಜನ್ಮದಾತ ಪಂಡಿತನಾಗಿರುವುದಿಲ್ಲ. ಬೇಂದ್ರೆ ಅವರು ವರಕವಿ. ಅವರನ್ನು ವರಕವಿ ಅಂತಲೇ ಕರೆಯಬೇಕು ಎಂದು ವಾಮನ ಬೇಂದ್ರೆ ತಮ್ಮ ಕೊನೆಗಾಲದವರೆಗೂ ಹಟ ಮಾಡುತ್ತಿದ್ದರು. ಆದರೆ ಬೇಂದ್ರೆ ಅವರ ಪ್ರಾರಂಭದ ಕವಿತೆಗಳಲ್ಲಿ ಸಾಕಷ್ಟು ದೋಷಗಳು ಇದ್ದವು. ಅನುಕರಣೆ ಇತ್ತು. ಕುವೆಂಪು ಕಾವ್ಯದ ಆರಂಭದ ಕಾವ್ಯದಲ್ಲಿಯೂ ಅನುಕರಣೆ ಇದೆ. ಅದು ಸಹಜ. ಅದನ್ನು ದೊಡ್ಡ ದೋಷ ಎಂದು ಹೇಳಲಿಕ್ಕಾಗುವುದಿಲ್ಲ. ಆದರೆ ಒಟ್ಟಾರೆ ನೋಡಿದಾಗ ಅದನ್ನು ಅನುಕರಣೆ ಎಂದೇ ಹೇಳಬೇಕಾಗುತ್ತದೆ. ಹಾಗೆ, ವಿಮರ್ಶಕ ಕೂಡ ತಾನು ಪರಿಪೂರ್ಣನಾಗಿಯೇ ಹುಟ್ಟಿದ್ದೇನೆ ಎಂದು ಹೇಳಿಕೊಳ್ಳಾಗುವುದಿಲ್ಲ. ಸಾಹಿತ್ಯದ ಬಗ್ಗೆ ಇರುವ ಪರಿಕಲ್ಪನೆಗಳೂ ಬದಲಾಗುತ್ತವೆ. ಹಾಗಾಗಿ ವಿಮರ್ಶಕನ ದೃಷ್ಟಿ ಯಾವಾಗಲೂ ಎಚ್ಚರದಿಂದಿರಬೇಕು. ಅವನು ತನ್ನ ವಿದ್ವತ್ತಿನ ಮಿತಿಯಾಗಲಿ, ಸಂವೇದನೆಯ ಮಿತಿಯಾಗಲಿ, ಭಾಷೆಯ ಮಿತಿಯಾಗಲಿ, ಪೂರ್ವಗ್ರಹಗಳಾಗಲಿ ಇರುವುದು ಸಾಧ್ಯ ಎನ್ನುವುದನ್ನು ಒಪ್ಪಿಕೊಂಡೇ, ಪರಿವರ್ತನೆಯನ್ನು ಒಪ್ಪಿಕೊಂಡಾಗಲೇ ಸಮರ್ಥನಾಗುವುದು ಸಾಧ್ಯ. ವಿಮರ್ಶಕನೂ ನಿಂತ ನೀರಲ್ಲ.

● **ನೀವು ಮತ್ತೆ ಮತ್ತೆ ನಿಮ್ಮ ಕೃತಿಗಳಲ್ಲಿ ಲಿಟರರಿ ಸ್ಕಾಲರ್‌ಷಿಪ್ ಬಗ್ಗೆ ಹೇಳುತ್ತಲೇ ಇರುತ್ತೀರಿ. ಈಗಿನ ವಿಮರ್ಶೆಗಳಲ್ಲಿ ಆ ಸ್ಕಾಲರ್‌ಷಿಪ್ ನಮಗೆ ಕಾಣುವುದಿಲ್ಲ. ನಿಮಗೆ ಇಂದಿನ ವಿಮರ್ಶೆಯ ಪರಿಸ್ಥಿತಿಯ ಬಗ್ಗೆ, ವಿಮರ್ಶಕರ ಹಿನ್ನೆಲೆಯ ಬಗ್ಗೆ ಏನನಿಸುತ್ತದೆ?**

ನಾನು ಧಾರವಾಡಕ್ಕೆ ಬಂದ ಮೇಲೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಸಂಶೋಧನೆ ಮಾಡುವುದನ್ನು ಬಿಟ್ಟುಬಿಟ್ಟೆ. ಯಾಕೆ ಎಂದು ಕೇಳಿದರೆ ಇತ್ತೀಚೆಗಿನ ಜ್ಞಾನದ ಬಗ್ಗೆ ನಂಗೆ ಗೊತ್ತಿಲ್ಲ. ಪಾಶ್ಚಾತ್ಯರಲ್ಲಿ ಸಂಶೋಧನೆ ಪುಸ್ತಕರೂಪದಲ್ಲಿ ಬರುವ ಮೊದಲು ಪತ್ರಿಕೆಯಲ್ಲಿ ಬಂದಿರುತ್ತದೆ. ಅದು ಪುಸ್ತಕರೂಪ ತಾಳುವ ಹೊತ್ತಿಗೆ ಸಾಕಷ್ಟು ಸಮಯವಾಗಿರುತ್ತದೆ. ಯಾರೋ ಎರಡನೆಯವನು ಹೇಳಿದ್ದನ್ನು ಕೇಳಿಕೊಂಡು ನಾವು ಬರೆಯಬೇಕು. ನನಗೆ ಅದು ಮನಸ್ಸಾಗಲಿಲ್ಲ. ಹಾಗಾಗಿ ಪೂರ್ತಿ ಬಿಟ್ಟುಬಿಟ್ಟೆ. ಆದರೆ ಕನ್ನಡದಲ್ಲಿ ಅಂಥ ಸಂಶೋಧನೆಯ ಅಗತ್ಯ ಇತ್ತು. ಎಷ್ಟೋ ಲೇಖಕರ ಬಗ್ಗೆ ಯಾರೂ ಬರೆದೇ ಇರಲಿಲ್ಲ. ಉದಾಹರಣೆ ಹೇಳಬೇಕು ಅಂದರೆ ಗುಲ್ವಾಡಿ ವೆಂಕಟರಾಯರ ಕಾದಂಬರಿ 'ಇಂದಿರಾಬಾಯಿ' ಬಗ್ಗೆ ಯಾರೂ ಬರೆದೇ ಇರಲಿಲ್ಲ. ಆ ಕಾದಂಬರಿಯನ್ನು ಕಾರಂತರು ಮೆಚ್ಚಿಕೊಂಡಿದ್ದು, ಅವರ 'ಮರಳಿ ಮಣ್ಣಿಗೆ' ಕಾದಂಬರಿಯ ವರ್ಣನೆ, ಶೈಲಿಗಳಲ್ಲಿ